# ರಾಜ್ಯ ಕ್ರಿಕೆಟ್‌ನಲ್ಲಿ ನವಮನ್ವಂತರ

ಕರ್ನಾಟಕ ಕ್ರಿಕೆಟ್ ಪರಂಪರೆಯ ಚಿನ್ನದ ಕೊಂಡಿಗಳಂತಿದ್ದ ಚಾಂಪಿಯನ್ ಆಟಗಾರರು ಬೇರೆ ರಾಜ್ಯಗಳ ತಂಡಗಳಿಗೆ ವಲಸೆ ಹೋಗುತ್ತಿದ್ದಾರೆ. ಕರ್ನಾಟಕ ಕ್ರಿಕೆಟ್ ಹೊಸ 'ಗೋಲ್ಡನ್ ಗ್ಯಾಂಗ್' ನಿರೀಕ್ಷೆಯಲ್ಲಿದೆ.

■ ಪ್ರಮೋದ ಜಿ.ಕೆ.



ಆರ್. ವಿನಯ್ ಕುಮಾರ್

**ಎರಡು ವರ್ಷ ಆರು ಟ್ರೋಫಿ!**

ಹಿಂದಿನ ಐದಾರು ವರ್ಷಗಳಲ್ಲಿ ದೇಶಿ ಟೂರ್ನಿಗಳಲ್ಲಿ ಕರ್ನಾಟಕ ತಂಡದ ಅತ್ಯದ್ಭುತ ಸಾಧನೆಯನ್ನು ಸಂಕ್ಷಿಪ್ತವಾಗಿ ನಾಲ್ಕೇ ಪದಗಳಲ್ಲಿ ಹೀಗೆ ಹೇಳಬಹುದು. ಆದರೆ, ಇದರ ಹಿಂದಿರುವ ಸಾಹಸ, ಶ್ರಮ, ಬದ್ಧತೆ ದೊಡ್ಡದು. ರಾಜ್ಯ ತಂಡದ ಯುವ ಆಟಗಾರರಿಗೆ ನಾಯಕನಾಗಿದ್ದ ಆರ್. ವಿನಯ ಕುಮಾರ್ ಅವರ ಜವಾಬ್ದಾರಿಯುತ ನಡೆ ಈ ಎಲ್ಲ ಸಾಧನೆಗೆ ಸ್ಫೂರ್ತಿಯಾಗಿದ್ದು ಸುಳ್ಳಲ್ಲ.

ಬಲಗೈ ವೇಗದ ಬೌಲರ್ ವಿನಯ್ 15 ವರ್ಷಗಳ ಹಿಂದೆ ಕೋಲ್ಕತ್ತದ ಜಾಧವಪುರಿ ವಿಶ್ವವಿದ್ಯಾಲಯದ ಮೈದಾನದಲ್ಲಿ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದಾಗ ದೊಡ್ಡ ಗಣೇಶ, ಸುನೀಲ್ ಜೋಶಿ, ಸುಜಿತ್ ಸೋಮಸುಂದರ, ಜೆ. ಅರುಣ ಕುಮಾರ್, ವಿಜಯ ಭಾರದ್ವಾಜ್, ತಿಲಕ್ ನಾಯ್ಡು ಅವರಂಥ ಅನುಭವಿ ಆಟಗಾರರು ತಂಡದಲ್ಲಿದ್ದರು. ವೆಂಕಟೇಶ ಪ್ರಸಾದ್ ಆಗಷ್ಟೇ ನಿವೃತ್ತರಾಗಿದ್ದರು. ಆದ್ದರಿಂದ ವಿನಯ್ ಮೇಲೆ ದೊಡ್ಡ ಜವಾಬ್ದಾರಿ ಇತ್ತು. ತಂಡದಲ್ಲಿ ಸ್ಥಾನ ಉಳಿಸಿಕೊಳ್ಳಲು ಶಕ್ತಿಮೀರಿ ಹೋರಾಟ ಮಾಡಬೇಕಿದ್ದು ಅನಿವಾರ್ಯವಾಗಿತ್ತು. ಇದನ್ನು 'ದಾವಣಗೆರೆ ಎಕ್ಸ್‌ಪ್ರೆಸ್' ರಾಜ್ಯ ತಂಡದ ಪರ ಆಡಿದ ಕೊನೆಯ ಪಂದ್ಯದ ತನಕವೂ ಸಮರ್ಥವಾಗಿ ನಿಭಾಯಿಸಿದರು.

## ಆಟೊ ಚಾಲಕನ ಪುತ್ರನ ಅನನ್ಯ ಸಾಧನೆ

ವಿನಯ್ ಕುಮಾರ್ 130 ಪ್ರಥಮ ದರ್ಜೆ ಪಂದ್ಯಗಳಿಂದ ಒಟ್ಟು 3,025 ರನ್ ಗಳಿಸಿ, 459 ವಿಕೆಟ್‌ಗಳನ್ನು ಉರುಳಿಸಿದ್ದಾರೆ. ರಾಜ್ಯ ತಂಡದ ಪರ 106 ರಣಜಿ, ಮೂರು ಇರಾನಿ ಪಂದ್ಯಗಳನ್ನಾಡಿದ್ದಾರೆ.

2007–08ರಲ್ಲಿ ರತ್ನಗಿರಿಯಲ್ಲಿ ನಡೆದ ಮಹಾರಾಷ್ಟ್ರ ಎದುರಿನ ರಣಜಿ ಪಂದ್ಯದಲ್ಲಿ ಹತ್ತು ವಿಕೆಟ್‌ಗಳನ್ನು ಉರುಳಿಸಿದ್ದರು. ಅನಿಲ್ ಕುಂಬ್ಳೆ ಬಳಿಕ ರಣಜಿಯಲ್ಲಿ ಹ್ಯಾಟ್ರಿಕ್ ವಿಕೆಟ್ ಪಡೆದ ರಾಜ್ಯ ತಂಡದ ಎರಡನೇ ಬೌಲರ್ ಎನಿಸಿದ್ದಾರೆ. ಸತತ ಎರಡು ವರ್ಷ ರಣಜಿ ಮತ್ತು ಇರಾನಿ ಟೂರ್ನಿಯಲ್ಲಿ ತಂಡ ಚಾಂಪಿಯನ್ ಆದಾಗ ನಾಯಕರಾಗಿದ್ದ ರಾಜ್ಯದ ಏಕೈಕ ಆಟಗಾರ ಎನ್ನುವ ಕೀರ್ತಿಯೂ ವಿನಯ್ ಹೆಸರಿನಲ್ಲಿದೆ. ರಣಜಿ ಟೂರ್ನಿಯಲ್ಲಿ ಹೆಚ್ಚು ಪಂದ್ಯಗಳಲ್ಲಿ (59) ರಾಜ್ಯ ತಂಡವನ್ನು ಮುನ್ನಡೆಸಿದ ನಾಯಕರಾಗಿದ್ದಾರೆ. ಮೊದಲು ಇಎಎಸ್ ಪ್ರಸನ್ನ (37 ಪಂದ್ಯಗಳು) ಅವರ ಹೆಸರಿನಲ್ಲಿ ಈ ದಾಖಲೆಯಿತ್ತು.

ದಾವಣಗೆರೆಯಲ್ಲಿ ಆಟೊ ಚಾಲಕರಾಗಿದ್ದ ರಂಗನಾಥ್ ಅವರ ಪುತ್ರ ವಿನಯ್ ಒಂದೂವರೆ ದಶಕದಲ್ಲಿ ಇಷ್ಟೆಲ್ಲ ದಾಖಲೆಗಳನ್ನು ಮಾಡಿದ್ದಾರೆ. ಕ್ರಿಕೆಟ್‌ನಲ್ಲಿನ ಅವರ ಸಾಧನೆ ಮತ್ತು ವೈಯಕ್ತಿಕ ಬದುಕು ಎರಡೂ ಸ್ಫೂರ್ತಿಯಾಗುವಂಥದ್ದು.